ಮಾಡಲು ಅಗತ್ಯವಾದ ಮೂಲ ದಾಖಲಾತಿಗಳನ್ನು ಜರೂರಾಗಿ ಒದಗಿಸುವಂತೆ ಎಲ್ಲಾ ಫೋರ್‌ಮನ್‌ಗಳಿಗೆ ಸೂಚನೆ ನೀಡಲು ಕ್ರಮವಿಡುವಂತೆ ಶ್ರೀ ರಾಮ ಚಿಟ್ಸ್ ಸಂಸ್ಥೆಯ ಕೇಂದ್ರ ಕಛೇರಿಗೆ ಸೂಚಿಸಲಾಗಿದೆ.

ಎ.ಪಿ.ಎಂ.ಸಿ. ಗೆ ಜಮೀನು

1673 (1759) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) - ಮಾನ್ಯ ಕೃಷಿ ಮತ್ತು ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿ ಬ್ಯಾಟರಾಯನಪುರ ನಗರಸಭಾ ವ್ಯಾಪ್ತಿಯ ಅಮೃತಹಳ್ಳಿ ಸರ್ವೆ ನಂಬರುಗಳಲ್ಲಿ ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ;

ಆ) ಈ ಜಮೀನನ್ನು ಯಾವ ಉದ್ದೇಶಕ್ಕೋಸ್ಕರ ವಶಪಡಿಸಿಕೊಳ್ಳಲಾಗಿದೆ ;

ಇ) ಇದು ಯಾವ ಹಂತದಲ್ಲಿದೆ ;

ಈ) ಇದರಲ್ಲಿ ರೈತರ ಜಮೀನಿನ ಹಣ ಪೂರ್ತಿ ಪಾವತಿ ಮಾಡಲಾಗಿದೆಯೇ ; ಇಲ್ಲದಿದ್ದಲ್ಲಿ, ಯಾವಾಗ ಪಾವತಿ ಮಾಡಲಾಗುವುದು ; (ವಿವರ ನೀಡುವುದು) ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮತ್ತು ಮಾರುಕಟ್ಟೆ ಸಚಿವರು):

ಅ) 28.29 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಆ) ಹಣ್ಣು ಮತ್ತು ತರಕಾರಿಗಳ ಸಗಟು ವಹಿವಾಟಿಗೆ ಆಧುನಿಕ ಮಾರುಕಟ್ಟೆ ನಿರ್ಮಿಸಲು ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಇ) ಮಾನ್ಯ ನ್ಯಾಯಾಲಯದಲ್ಲಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ದಾವೆಗಳಿದ್ದು ಪ್ರಸ್ತುತ ಎಲ್ಲಾ ದಾವೆಗಳು ವಜಾ ಆಗಿರುತ್ತವೆ. ಜುಲೈ 2002 ಹಾಗೂ ಫೆಬ್ರವರಿ 2003ರಲ್ಲಿ ಒಟ್ಟು 28.29 ಎಕರೆ ಜಮೀನು ಸ್ವಾಧೀನಕ್ಕೆ ಪಡೆಯಲಾಗಿದೆ.

ಮಾರುಕಟ್ಟೆ ನಿರ್ಮಾಣಕ್ಕಾಗಿ ಅವಶ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಈ) ಸಂಬಂಧಿಸಿದ ಜಮೀನುಗಳ ಭೂಮಾಲೀಕರು ಪರಿಹಾರ ಹಣವನ್ನು ಪಡೆಯಲು ಅರ್ಜಿ ಸಲ್ಲಿಸದೇ ಇದ್ದ ಕಾರಣ ಒಟ್ಟು 43,84,902/ ಗಳನ್ನು ಭೂಸ್ವಾಧೀನ ಕಾಯ್ದೆ ಕಲಂ 30 ಮತ್ತು 31 ರನ್ವಯ ದಿನಾಂಕ 23.5.2002ರಂದು ಸಂಬಂಧಪಟ್ಟ ನ್ಯಾಯಾಲಯದಲ್ಲಿ ಠೇವಣಿ ಮಾಡಲಾಗಿದೆ.

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಬ್ಯಾಟರಾಯನಪುರ ಎ.ಪಿ.ಎಂ.ಸಿ.ಗೆ ಭೂ ಸ್ವಾಧೀನ ಬಾಬ್ತು ಸಿಟಿ ಸಿವಿಲ್ ನ್ಯಾಯಾಲಯಕ್ಕೆ ದಿನಾಂಕ 23.5.2002ರಂದು ಠೇವಣಿ ಮಾಡಿದ ವಿವರ

ಕ್ರಮ ಸಂಖ್ಯೆ	ಸರ್ವೆ ಸಂ.	ವಿಸ್ತೀರ್ಣ	ವೋಚರ್ ಸಂ.	ಮೊಬಲಗು
1)	6:3	1-03	133:02-03	155295-00
2)	8:1ಎ	0-36	134:02-03	260044-00
3)	15:1	1-25	135:02-03	365723-00
4)	8:1 8:2	1-02	136	281010-00

1	2	3	4	5
5)	14:1ಎ	0-23	137	85042-00
6)	131:1, 13:2ಎ, 13:2ಬಿ, 13:4	6-35	138	1016812-00
7)	7:2	0.35	139	129412-00
8)	5:1 5:2ಎ	2-48	140	372155-00
9)	7:1	1-27	141	247732-00
10)	7:2ಎ	2-26	142	291935-00
11)	15:2	1-23	143	665622-00
12)	15:3	2-32	144	414120-00
	ಒಟ್ಟು			ರೂ. 43,84,902-00

ಬೆಂಗಳೂರು ಯಶವಂತಪುರ ಎ.ಪಿ.ಎಂ.ಸಿ.ಯ ವರಮಾನ

1674 (1760) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) - ಮಾನ್ಯ ಕೃಷಿ ಮತ್ತು ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಯಶವಂತಪುರ ಎ.ಪಿ.ಎಂ.ಸಿ ವ್ಯಾಪ್ತಿಗೆ ಬರುವ ತಾಲ್ಲೂಕುಗಳು ಯಾವುವು ;

ಆ) ಈ ಎ.ಪಿ.ಎಂ.ಸಿ. ಯಲ್ಲಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿ ಎಷ್ಟು ದಿನಗಳಾಯಿತು ;

ಇ) ಹಾಗಿದ್ದಲ್ಲಿ, ಚುನಾವಣೆ ನಡೆಸದೇ ಇರಲು ಕಾರಣಗಳೇನು ;

ಈ) ಯಶವಂತಪುರ ಎ.ಪಿ.ಎಂ.ಸಿ. ಯಿಂದ ಸರ್ಕಾರಕ್ಕೆ ಬರುವ ವಾರ್ಷಿಕ ವರಮಾನ ಎಷ್ಟು ; ಇದರಿಂದ ರೈತರಿಗೆ ಮಾಡಿರುವ ಅನುಕೂಲಗಳೇನು ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮತ್ತು ಮಾರುಕಟ್ಟೆ ಸಚಿವರು):

ಅ) ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ ಹಾಗೂ ಆನೇಕಲ್

ಆ) ದಿನಾಂಕ: 02.05.1989 ರಿಂದ ಆಡಳಿತಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಇ) ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮ, 1966ರ ಪ್ರಕರಣ 13(4)ರ ಮೇರೆಗೆ ಮುಂದಿನ ಆದೇಶದವರೆಗೆ ಚುನಾವಣೆಯಿಂದ ಅಧಿಸೂಚನೆ ಸಂಖ್ಯೆ ಸಿಎಂಡಬ್ಲ್ಯು.148.ಎಂಆರ್‌ಇ.96 (ಪಿ), ದಿನಾಂಕ. 21.12.1996ರಲ್ಲಿ ಸರ್ಕಾರವು ವಿನಾಯ್ತಿ ನೀಡಿರುತ್ತದೆ.

ಈ) ಸರ್ಕಾರಕ್ಕೆ ಸಮಿತಿಯಿಂದ ಯಾವುದೇ ವರಮಾನ ಬರುವುದಿಲ್ಲ.

ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ರೈತರಿಗೆ ಉಪಯೋಗವಾಗುವ ಟ್ರಾಕ್ಟರ್ ಹಾಗೂ ಪವರ್ ಟಿಲ್ಲರ್‌ಗಳಿಗೆ ರಿಯಾಯಿತಿ ಹಣ

1675 (1761) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) - ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?